ಸಾಗರ ತಾಲ್ಲೂಕಿನ ಸೀತಾರಾಮು ಎಂಬ ಯುವಕ ನಾಪತ್ತೆಯಾಗಿರುವ ಬಗ್ಗೆ

(೫೨) ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಡೆ (ಸಾಗರ)—ಮುಖ್ಯಮಂತ್ರಿಗಳುಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಸಾಗರ ತಾಲ್ಲೂಕು ಕಾನ್ಲೆ ಎಂಬ ಊರಿನ ಶ್ರೀ ಪುಟ್ಟಪ್ಪ ಎಂಬುವವರ ಮಗ ಸೀತಾರಾಮು ಎಂಬ ಯುವಕನು ಮೂರು ತಿಂಗಳಿನಿಂದ ನಾಪತ್ತೆಯಾಗಿ ತಾಲ್ಲೂಕಿನ ಆದ್ಯಂತ ಅನೇಕ ಉಹಾಪೋಹ ಗಳಿಗೆ ಅವಕಾಶವಾಗಿದೆಯಲ್ಲವೆ.

(ಆ) ಸಾಗರ ಮತ್ತು ಸಿಸಿ ಪೋಲೀಸರಿಗೆ ದೂರು ಕೊಟ್ಟಿದ್ದು ಈವರೆಗೆ ಆಸಕ್ತಿವಹಿಸಿ ತನಿಖೆ ನಡೆಸದಿರುವುದು ಸರಕಾರದ ಗಮನಕ್ಕೆ ಬಂದಿದೆಯೆ.

(೫) ಪೋಲೀಸರು ಪ್ರಭಾವಕ್ಕೆ ಒಳಗಾಗಿ ತನಿಖೆಗೆ ಕ್ರಮ ತೆಗೆದುಕೊಂಡಿಲ್ಲ ಎಂಬುದು ನಿಜವೇ?

ಶ್ರೀ ಆರ್. ಗುಂಡೂರಾವ್ (ಮುಖ್ಯ ಮಂತ್ರಿಗಳು)—

ಉತ್ತರ— (ಅ) ಹೌದು.

(ಆ) ಇಲ್ಲ.

(೫) ಇಲ್ಲ, ತನಿಖೆಯ ನಂತರ ದಿನಾಂಕ ೧೫-೬-೧೯೮೨ರಂದು ಜೆ. ಎಂ. ಎಫ್ ಸಿ. ಕೋರ್ಟು, ಸಾಗರ ಇಲ್ಲಿ ಚಾರ್ಜಶೀಟ್ ಸಲ್ಲಿಸಲಾಗಿದೆ ಅಲ್ಲಿ ಈ ಪ್ರಕರಣವು ವಿಚಾರಣೆಯಲ್ಲಿದೆ.

ಬೆಂಗಳೂರು ಜಿಲ್ಲೆಯಲ್ಲಿ ಕೆಂಗೇರಿ ವಿದ್ಯಾ ಸಂಸ್ಥೆಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಬಗ್ಗೆ

(೫೩) ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಡೆ (ಸಾಗರ)—ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಬೆಂಗಳೂರು ಜಿಲ್ಲೆಯಲ್ಲಿ ಕೆಂಗೇರಿ ವಿದ್ಯಾ ಸಂಸ್ಥೆ ಎಂಬ ಸಂಸ್ಥೆ ಪ್ರೈಮರಿ ಪ್ರೌಢಶಾಲೆ ಮತ್ತು ಜೂನಿಯರ್ ಕಾಲೇಜುಗಳನ್ನು ನಡೆಸುತ್ತಿದೆಯೆ, ಈ ವಿದ್ಯಾ ಸಂಸ್ಥೆ ಎಷ್ಟು ವರ್ಷದಿಂದ ಇದೆ, ಈಗ ಎಷ್ಟು ವಿದ್ಯಾರ್ಥಿಗಳಿದ್ದಾರೆ,

(ಆ) ಈ ಸಂಸೆ ರಿಜಿಸ್ಟರ್ ಆದದ್ದೆ, ಯಾವ ಕಾನೂನು ಪ್ರಕಾರ, ಜನರಲ್ ಬಾಡಿ ಮತ್ತು ಆಡಳಿತ ಮಂಡಳಿ ಸದಸ್ಯರ ಚುನಾವಣೆಗಳು ಆಗಿದೆಯೇ ಮತ್ತು ಸಂಸ್ಥೆ ವಿದ್ಯಾರ್ಥಿಗಳಿಂದ ವಸೂಲು ಮಾಡುವ ಹಣ ಕ್ರಮಬದ್ಧವೇ.

(೫) ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿವೆಯೇ ಹಾಗಿದ್ದರೆ ಸರಕಾರದ ಕ್ರಮ ಏನು?

ಶ್ರೀಮತಿ ನಾಗಮ್ಮ ಸಿ ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು)—

ಉತ್ತರ— (ಅ) ಈ ವಿದ್ಯಾ ಸಂಸ್ಥೆಯು ೧೯೫೭ರಿಂದ ಅಸ್ತಿತ್ವದಲ್ಲಿದೆ ಈ ಸಂಸ್ಥೆಯು ಪ್ರಾಥಮಿಕ ಪ್ರೌಢಶಾಲೆ ಮತ್ತು ಜೂನಿಯರ್ ಕಾಲೇಜನ್ನು ನಡೆಸುತ್ತಿದೆ. ಈಗ ಈ ವಿದ್ಯಾ ಸಂಸ್ಥೆಯಲ್ಲಿ ೧೧೭೬ ವಿದ್ಯಾರ್ಥಿಗಳಿದ್ದಾರೆ.

(ಆ) ಈ ಸಂಸ್ಥೆ ಕರ್ನಾಟಕ ಸರಕಾರದ ಸೊಸೈಟಿಗಳ ರಿಜಿಸ್ಟ್ರೇಶನ್ ಕಾನೂನು ಪ್ರಕಾರ ೧೯೫೭ನೇ ಸಾಲಿನಲ್ಲಿ ೨೨-೪-೧೯೫೭ರಲ್ಲಿ ರಿಜಿಸ್ಟರ್ ಆಗಿರುತ್ತದೆ. ಜನರಲ್ ಬಾಡಿ ಮೀಟಿಂಗ್ ಮತ್ತು ಆಡಳಿತ ಮಂಡಳಿಯ ಸದಸ್ಯರುಗಳ ಚುನಾವಣೆಗಳು ಕಾನೂನು ಪ್ರಕಾರ ಆಗಿರುವುದಿಲ್ಲ. ಸಂಸ್ಥೆಯ ವಿದ್ಯಾರ್ಥಿಗಳಿಂದ ಕ್ರಮಬದ್ಧವಾದ ಶುಲ್ಕವನ್ನು ತೆಗೆದುಕೊಂಡಿರುವ ಬಗ್ಗೆ ತನಿಖೆ ನಡೆಯುತ್ತಿದೆ.

(೫) ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿವೆ. ಅನುದಾನ ಸಂಹಿತೆಯ ಕಾನೂನು ಪ್ರಕಾರ ಆಡಳಿತ ಮಂಡಳಿಯ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿಂದೂ ಸಮ್ಮೇಳನಕ್ಕಾಗಿ ಸರಕಾರ ನೀಡಿದ ಸೌಲಭ್ಯದ ಬಗ್ಗೆ

(೫೪)ಶ್ರೀ ಪಿ. ರಾಂದೇವ್ (ಮಲ್ಲೇಶ್ವರ) ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—